O.S .No.9/2019
PW-1

ದಿನಾಂಕ: 25-05-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್.ಎಲ್.ಜಿ ವಕೀಲರಿಂದ</u>**

ನಾನು ಹುಣಸೂರು ವಾಸಿ. ಹುಣಸೂರಿನಲ್ಲಿ ಏಲ್ಲಿ ವಾಸವಾಗಿದ್ದೀರಿ ಎಂದರೆ ಸಾಕ್ಷಿ ಜಾಗ ಗೊತ್ತಿಲ್ಲ ಎಂದು ಹೇಳುತ್ತಾರೆ. ನೀವು ವಾಸ ಇರುವ ಬಾಡಿಗೆ ಮನೆಯ ಮಾಲೀಕರ ಹೆಸರೇನು ಎಂದರೆ ಸಾಕ್ಷಿ ಪಳನಿಸ್ವಾಮಿ ಎಂದು ಹೇಳುತ್ತಾರೆ. ದಾವೆ ಹೂಡುವ ಕಾಲಕ್ಕೆ ನಾನು ರತ್ನಪುರಿ ವಿಳಾಸವನ್ನು ನೀಡಿರುತ್ತೇನೆ. ರತ್ನಪುರಿ ಗ್ರಾಮದ ಮನೆಯ ನಂ.132 ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ನನ್ನ ಮಗ ಕಾರ್ತಿಕ್‌ನದ್ದು ಎಂದು ಹೇಳುತ್ತಾರೆ. ನನಗೆ ಇಬ್ಬರು ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು. ನಿಮ್ಮ ಮಕ್ಕಳು ಎಲ್ಲ ರತ್ನಪುರಿಯಲ್ಲಿ ವಾಸವಾಗಿದ್ದಾರಾ ಎಂದರೆ ಸಾಕ್ಷಿ ಇಲ್ಲ, ಮಗಳು ಸರಗೂರು ಗ್ರಾಮದಲ್ಲಿ ಇದ್ದು, ಇನ್ನೊಬ್ಬ ಮಗ ಮೈಸೂರಿನಲ್ಲಿ ವಾಸ ಮಾಡುತ್ತಿದ್ದಾನೆ ಎಂದು ಹೇಳುತ್ತಾರೆ.

ನಿಮ್ಮ ಯಜಮಾನರು ಏಲ್ಲಿ ವಾಸವಾಗಿದ್ದಾರೆಂದರೆ ಸಾಕ್ಷಿ ನನ್ನೊಂದಿಗೆ ಇದ್ದಾರೆ ಎಂದು ಹೇಳುತ್ತಾರೆ. ನಾನು ಹುಣಸೂರಿಗೆ ಬಂದು ಈಗ್ಗೆ 6 ತಿಂಗಳಾಗಿರುತ್ತದೆ. 6 ತಿಂಗಳ ಹಿಂದೆ ವಾದ ಪತ್ರದಲ್ಲಿ ನಮೂದು ಇರುವ ವಿಳಾಸದಲ್ಲೇ ವಾಸವಾಗಿದ್ದೀರಿ ಎಂದರೆ ಸರಿ. ನೀವು ರತ್ನಪುರಿಯಲ್ಲಿ ಎಷ್ಟು ವರ್ಷಗಳ ಕಾಲ ವಾಸವಿದ್ದೀರಿ ಎಂದರೆ ಸಾಕ್ಷಿ ಸುಮಾರು 30 ವರ್ಷ ಎಂದು ಹೇಳುತ್ತಾರೆ. 30 ವರ್ಷದಿಂದ ವಾದ ಪತ್ರದಲ್ಲಿ ನಮೂದಿಸಿರುವ ವಿಳಾಸದಲ್ಲೇ ಇದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ.

ವಾದ ಪತ್ರದಲ್ಲಿ ನಮೂದಿಸಿರುವ ವಿಳಾಸದಲ್ಲಿರುವ ಮನೆಯ ದಾಖಲಾತಿ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ನನ್ನ ಯಜಮಾನರ ಹೆಸರಿನಲ್ಲಿದೆ ಎಂದು ಹೇಳುತ್ತಾರೆ. ದಾವಾ ಆಸ್ತಿ ಮಂಜೂರು ಆಗುವ ಎಷ್ಟು ವರ್ಷಗಳ ಮುಂಚಿತವಾಗಿ ಸರ್ಕಾರಕ್ಕೆ ಅರ್ಜಿ ಕೊಟ್ಟಿದ್ದೀರಿ ಎಂದರೆ ಸಾಕ್ಷಿ 2002 ರಲ್ಲಿ ಎಂದು ಹೇಳುತ್ತಾರೆ. ಅರ್ಜಿ ಸಲ್ಲಿಸಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸರ್ಕಾರದವರು ಯಾರಿಗೆ ಮನೆ ಇಲ್ಲವೋ ಅಂತಹವರಿಗೆ ಮಾತ್ರ ನಿವೇಶನವನ್ನು ಮಂಜೂರು ಮಾಡುತ್ತಾರೆಂದರೆ ಸಾಕ್ಷಿ ಕೊಡುತ್ತಿದ್ದರು ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಆಗ ನಾವು ಬಾಡಿಗೆ ಮನೆಯಲ್ಲಿದ್ದೇವು ಎಂದು ಹೇಳುತ್ತಾರೆ. ನಿವೇಶನಗಳನ್ನು ವಿಂಗಡಣೆ ಮಾಡಿ ಮಂಜೂರು

ಮಾಡಿದ ಜಾಗದ ನಕಾಶೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನಿವೇಶನವನ್ನು ಮಂಜೂರು ಮಾಡಿದ ಜಾಗದ ಸ.ನಂ. ಎಷ್ಟು ಎಂದರೆ ಸಾಕ್ಷಿ 995 ಎಂದು ಹೇಳುತ್ತಾರೆ. ಸದರಿ ಸ.ನಂ.995 ಸಾವಿರಾರೂ ಎಕರೆ ಜಮೀನು ಇದೆ ಎಂದರೆ ಸಾಕ್ಷಿ ಹೌದು, ಅದು ಎಷ್ಟಿದೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ಇಂದಿಗೂ ಸಹ ಸ.ನಂ.995 ರಲ್ಲಿ ಹಲವಾರು ಜನ ಅಕ್ರಮವಾಗಿ ಮನೆ ಕಟ್ಟಿಕೊಂಡಿದ್ದಾರೆಂದರೆ ಸರಿ. ದಾವಾ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ: ಶಾಲೆ, ಪಶ್ಚಿಮಕ್ಕೆ: ರಸ್ತೆ, ದಕ್ಷಿಣಕ್ಕೆ: ರಸ್ತೆ ಮತ್ತು ಉತ್ತರಕ್ಕೆ: ಬೇರೆಯವರ ನಿವೇಶನ. 1 ನೇ ಪ್ರತಿವಾದಿಯ ನಿವೇಶನದ ಪೂರ್ವಕ್ಕೆ ಸರ್ಕಾರಿ ರಸ್ತೆ ಇದೆ ಎಂದರೆ ಸಾಕ್ಷಿ ರಸ್ತೆ ಮುಂದೆ ಸರ್ಕಾರಿ ಶಾಲೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ನಿವೇಶನದ ಪಶ್ಚಿಮಕ್ಕೆ ಕೃಷಿ ಇಲಾಖೆ ಇದೆ ಎಂದರೆ ಸಾಕ್ಷಿ ನೋಡಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ನಿವೇಶನದ ಉತ್ತರಕ್ಕೆ ಬಸವರಾಜು ರವರ ಹೆಂಡತಿರವರ ಮನೆ ಎಂದರೆ ಸಾಕ್ಷಿ ಅವರು ಯಾರು ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ನಿವೇಶನದ ದಕ್ಷಿಣಕ್ಕೆ ಖಾಲಿ ನಿವೇಶನ ಇದೆ ಎಂದರೆ ಸರಿ. ದಾವಾ ಆಸ್ತಿಯ ಚೆಕ್ಕುಬಂಧಿಗೂ ಹಾಗೂ ಈ ಮೇಲೆ ಹೇಳಿದ ಚೆಕ್ಕುಬಂಧಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

ನಿಪಿ-1 ದಾಖಲೆಯನ್ನು ಸೃಷ್ಟಿಮಾಡಿಕೊಂಡಿದ್ದೀರಾ ಎಂದರೆ ಸರಿಯಲ್ಲ. ದಾವಾ ಆಸ್ತಿ ಖಾತೆ ಯಾವಾಗ ಆಯಿತೆಂದರೆ ಸಾಕ್ಷಿ 2004 ರಲ್ಲಿ ಎಂದು ಹೇಳುತ್ತಾರೆ. ಖಾತೆಯಾದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನೀವು 2004 ರಲ್ಲಿ ಖಾತೆಯಾದ ಬಗ್ಗೆ ದಾಖಲಾತಿಯನ್ನು ಕೊಟ್ಟಿಲ್ಲ, 2016 ರ ದಾಖಲಾತಿಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ 2016 ರ ದಾಖಲಾತಿಯನ್ನೇ ಕೊಟ್ಟಿದ್ದು ಎಂದು ಹೇಳುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಅನುಮತಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.